ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೇಗೆ ಕೊಡಲಿಕ್ಕೆ ಆಗುತ್ತದೆ? ವೈದ್ಯಕೀಯ ಪದವೀಧರರ ಅಪಾಯಿಂಟ್‌ಮೆಂಟ್ ಬಗ್ಗೆ ಆಲೋಚನೆ ಮಾಡೋಣ.

ಮಂಗಳೂರಿನ ಕಂಕನಾಡಿಯಿಂದ ತಲಪಾಡಿ ಗಡಿಯವರೆಗೆ ಓಡುವ ಸಿಟಿ ಎಕ್ಸ್‌ಪ್ರೆಸ್ ಬಸ್‌ಗಳನ್ನು ನಿಲ್ಲಿಸುವುದು ಮತ್ತಿತರ ಬಸ್ಸುಗಳ ವೇಗ ಕಡಿಮೆಗೊಳಿಸುವುದು

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷೀಣಿಯವರೆ, ಮಂಗಳೂರಿನ ಕಂಕನಾಡಿಯಿಂದ ತಲಪಾಡಿ ಗಡಿವರೆಗೆ 17 ಕಿಲೋಮೀಟರಿನಲ್ಲಿ ಬಾಹನ ಸಂಚಾರ ಭಾರಿ ವಿಪರೀತ ಇದೆ. ತಲಪಾಡಿವರೆಗೆ 50 ಕ್ಕೂ ಮಿಕ್ಕಿ, ಕೊಣಾಜೆಗೆ 8-10ಕ್ಕೂ ಮಿಕ್ಕಿ, ಉಳ್ಳಾಲಕ್ಕೆ 10ಕ್ಕೆ ಮಿಕ್ಕಿ ಸಿಟಿಬಸ್‌ಗಳು ಓಡಾಡುತ್ತಿವೆ. ಈ ಸಿಟಿ ಬಸ್ಸುಗಳ ಮಿತಿಮೀರಿದ ವೇಗದಿಂದ ಅನೇಕ ಅಪಘಾತಗಳು ಆಗಾಗ ನಡೆದಿದೆ. ಅಲ್ಲದೆ ನಾಲ್ಕೈದು ಎಕ್ಸ್‌ಪ್ರೆಸ್ ಸಿಟಿಬಸ್ಸುಗಳು ಓಡುತ್ತಿವೆ. ಈ ಎಕ್ಸ್‌ಪ್ರೆಸ್ ಬಸ್ಸುಗಳ ತಡೆಯಿಲ್ಲದ ವೇಗದ ಓಟದಿಂದ ಅಪಘಾತಗಳಾಗಿ ಅನೇಕ ಜೀವಗಳು ಹೋಗಿವೆ. ಡಿಸೆಂಬರ್ 30ರಿಂದ ಶುಚ್ಚಿಲದಲ್ಲಿ ಎಕ್ಸ್‌ಪ್ರೆಸ್ ಸಿಟಿಬಸ್ಸಿನಡಿಗೆ ಬಿದ್ದು ಶಾಲಾ ವಿದ್ಯಾರ್ಥಿ ತೀರಿಹೋಗಿದ್ದಾರೆ. ಈ 17 ಕಿಲೋಮೀಟರಿನಲ್ಲಿ ಸಂಜೆಗತ್ತಲೆ ಶಾಲೆಗಳಿವೆ, ಮದ್ರಸಗಳಿವೆ.

ಆದಕಾರಣ ಈ ಎಕ್ಸ್‌ಪ್ರೆಸ್ ಸಿಟಿಬಸ್ಸುಗಳನ್ನು ನಿಲ್ಲಿಸಿಬಿಡುವುದು ಒಳ್ಳೆಯದು. ಉಳಿದ ಸಿಟಿಬಸ್ಸುಗಳ ವೇಗವನ್ನು ಕಡಿಮೆಗೊಳಿಸಬೇಕು. ಓವರ್‌ಲೋಡ್ ಓವರ್‌ಟೇಕ್ ಮೀತಿಮೀರಿದೆ. ಇದನ್ನು ತಪಿಸಿ ಮಾಡಬೇಕು. ಈ ಕುರಿತು ಸಾರಿಗೆ ಮಂತ್ರಿಗಳನ್ನು ಗಮನವನ್ನು ಸೆಳೆಯುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾರ್ಮಿಕ ಸಚಿವರು) : ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರವನ್ನು ಸಂಬಂಧಪಟ್ಟ ಸಾರಿಗೆ ಸಚಿವರಿಗೆ ತಿಳಿಸಿ ನೀವು ಹೇಳಿದಹಾಗೆ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸೂಚಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಿರಿಮಂಜೇಶ್ವರ ಗ್ರಾಮದ ಕೊಡೇರಿಗೆ ಸಮುದ್ರ ಕೊರತೆಯಿಂದಾಗುವ ಅನಾಹುತವನ್ನು ತಪ್ಪಿಸಲು ತಡೆಗೋಡೆ

ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಉಪಾಧ್ಯಕ್ಷೀಣಿಯವರೇ, ವಿಪರೀತ ಮಳೆ, ನದಿಪ್ರವಾಹ, ಸಮುದ್ರ ಕೊರೆತದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಿರಿಮಂಜೇಶ್ವರ ಗ್ರಾಮದ ಕೊಡೇರಿ ಎಂಬಲ್ಲಿ ಹಿರಿಯ ಪ್ರಾಥಮಿಕ ಶಾಲಾ ನಿವೇಶನ, ಆಟದ ಬಯಲು ಕೊರೆದು ಹೋಗಿ ದಾರಿ ಸಹ ತುಂಡಾಗುವ ಸಂಭವ ಇದೆ. ಕೊರೆದುಹೋದ ಪ್ರದೇಶ ತುಂಬಿಸಿ, ತಡೆಗೋಡೆ ಕಟ್ಟದಿದ್ದಲ್ಲಿ ಶಾಲೆಗೂ, ರಸ್ತೆಗೂ ಅಪಾಯ. ಸಹಸ್ರಾರು ಮೀನುಗಾರರಿರುವ ಕೊಡೇರಿ ಭಾಗ ತುಂಡಾಗ, ದ್ವೀಪವಾಗುವ ಸಂಭವ ಇದೆ. ಈ ಪ್ರಕೃತಿ ವಿಕೋಪದ ಬಗ್ಗೆ ತುರ್ತು ಕ್ರಮಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳನ್ನು ಬೇಳಿಕೊಳ್ಳಲಾಗಿದೆ. ಸಾಕಷ್ಟು ಹಣ ಒದಗಿಸಿ, ಪರಿಹಾರ ಕಾಮಗಾರಿ ಕೂಡಲೇ ಕೈಕೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಮಂತ್ರಿ) : ಮಾನ್ಯ ಉಪಾಧ್ಯಕ್ಷೀಣಿಯವರೆ, ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸುತ್ತೇನೆ.